**ಓ.ಎಸ್. ನಂಃ 320/2023**

**ಪಿ. ಡಬ್ಲ್ಯೂಃ 1**

**ದಿನಾಂಕ 11.02.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಸರಕಾರಿ ವಕೀಲರಿಂದಃ**

1. ನಾನು ಈ ದಾವೆಯ 1 ನೇ ವಾದಿಯಾಗಿದ್ದು, ನನ್ನನ್ನು ದಾವಾ ಎ ಅನುಸೂಚಿ ಆಸ್ತಿಯ ಮಾಲೀಕ ಎಂದು ಘೋಷಿಸುವಂತೆ ಕೋರಿ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ದಾವಾ ಎ ಅನುಸೂಚಿ ಆಸ್ತಿಯು ನನಗೆ 1938 ರ ಕ್ರಯದ ಮೂಲಕ ಬಂದಿರುತ್ತದೆ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

2. 1938 ರಲ್ಲಿ ಸರ್ವೇ ನಂಬರ್ 113/3 ರ 10 ಗುಂಟೆ ಜಮೀನನ್ನು ಭೂ-ಸ್ವಾಧೀನಾಧಿಕಾರಿಯವರು ಪುಟ್ಟಪ್ಪ ಬಿನ್ ದ್ಯಾವಣ್ಣ ಎನ್ನುವವರಿಗೆ ಅವಾರ್ಡ್ ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನನ್ನ ತಾತನಾದ ಪುಟ್ಟಸ್ವಾಮಯ್ಯರವರು ಖರೀದಿಸಿರುತ್ತಾರೆ. ದಾವಾ ಆಸ್ತಿಗಳನ್ನು ನನ್ನ ತಾತ ಖರೀದಿಸಿದ ನಂತರ ದಾವಾ ಆಸ್ತಿಗಳ ಪಹಣಿಗಳಲ್ಲಿ ನನ್ನ ತಾತನ ಹೆಸರು ನಮೂದಾಗಿದ್ದು, ಇತ್ತೀಚೆಗೆ ದಾವಾ ಆಸ್ತಿಯ ಪಹಣಿಗಳಲ್ಲಿ ಸರಕಾರದ ಹೆಸರು ನಮೂದಾಗಿರುತ್ತದೆ.

3. ನನ್ನ ತಾತನ ಕಾಲದಿಂದಲೂ ಸಹ ನಾವು ದಾವಾ ಆಸ್ತಿಗಳಿಗೆ ಕಂದಾಯ ಕಟ್ಟುತ್ತಾ ಬಂದಿರುತ್ತೇವೆ ಹಾಗೂ ಅದರ ಸಂಬಂಧ ಕಂದಾಯ ರಸೀದಿಗಳನ್ನು ಸಹ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಗಳ ಖಾತೆಯನ್ನು ನಮ್ಮ ಹೆಸರಿಗೆ ವರ್ಗಾಯಿಸುವಂತೆ ಕೋರಿ ತಹಸೀಲ್ದಾರ್‌ರವರಿಗೆ ನಾವು ಸಲ್ಲಿಸಿದ ಅರ್ಜಿಗೆ ತಹಸೀಲ್ದಾರ್ ರವರು ನಮಗೆ ಕ್ರಯಕ್ಕೆ ಕೊಟ್ಟ ಮಾರಾಟಗಾರನ ಹೆಸರಿನಲ್ಲಿಯೇ ದಾವಾ ಆಸ್ತಿಗಳ ಪಹಣಿ ಇರದಿದ್ದ ಕಾರಣ ಕ್ರಯ ಪತ್ರದ ಆಧಾರದ ಮೇರೆಗೆ ದಾವಾ ಆಸ್ತಿಗಳ ಪಹಣಿಗಳನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಲು ಆಗುವುದಿಲ್ಲ ಎಂದು ದಿನಾಂಕ 06.04.2023 ರಂದು ತಹಸೀಲ್ದಾರ್ ರವರು ನಮಗೆ ಹಿಂಬರಹವನ್ನು

ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಹಿಂಬರಹವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಡಿ.1 ಎಂದು ಗುರುತಿಸಲಾಯಿತು.

4. ಹಿಂದಿನಿಂದಲೂ ಇಂದಿನವರೆಗೂ ದಾವಾ ಆಸ್ತಿಗಳು ಸರಕಾರದ ಹೆಸರಿನಲ್ಲಿಯೇ ಇರುತ್ತದೆ ವಿನಹಃ ದಾವಾ ಆಸ್ತಿಗಳು ನಮ್ಮ ಹೆಸರಿನಲ್ಲಿದ್ದಾಗಲೀ ಅಥವಾ ನಮಗೆ ಮಾರಾಟ ಮಾಡಿದ ಪುಟ್ಟಪ್ಪ ಬಿನ್ ದ್ಯಾವಣ್ಣ ರವರ ಹೆಸರಿನಲ್ಲಿ ಎಂದೂ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಸರಕಾರಿ ಜಮೀನುಗಳಾಗಿದ್ದು, ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ನಾವು ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಸರಕಾರಕ್ಕೆ ಸೇರಿರುವ ಆಸ್ತಿಗಳಾಗಿರುವ ಕಾರಣ ಸದರಿ ಆಸ್ತಿಗಳು ಎಂದಿಗೂ ಸಹ ನಮ್ಮ ಹೆಸರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**